ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,

ಕುಣಿಗಲ್.

ಸಿ.ಸಿ.ನಂ. 4404/2023

ಸಿ.ಡಬ್ಲ್ಯೂ -04
ಪಿ.ಡಬ್ಲ್ಯೂ-05

ಸಾಕ್ಷಿದಾರನ ಹೆಸರುಃ- ಭರತ ಕುಮಾರ್
ತಂದೆಯ ಹೆಸರು ಗಿರೀಶ್ ಹೆಚ್ ಎನ್
ವಯಸ್ಸು 25 ವರ್ಷ
ಉದ್ಯೋಗ ವ್ಯವಸಾಯ
ವಾಸ ಹೊನ್ನೆಗೌಡನಪಾಳ್ಯ

**ಸಾಕ್ಷಿಗೆ ದಿಃ 20.01.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಚಾಸಾ 1 ಮತ್ತು 2 ನನ್ನ ತಂದೆ ತಾಯಿ ಆಗಬೇಕು. ಆರೋಪಿತರು ನನಗೆ ಗೊತ್ತು. ದಿಃ 11.07.2022 ರಂದು ನಾನು ಕುಣಿಗಲ್ ನ ಕಾಲೇಜಿನಲ್ಲಿದ್ದಾಗ ಮದ್ಯಾಹ್ನ 3.15ರ ಸಮಯದಲ್ಲಿ ಚಾಸಾ 3 ಅವರು ತಮ್ಮ ಫೋನ ಮೂಲಕ ಕರೆ ಮಾಡಿ ಅದೇ ಗ್ರಾಮದ ಆರೋಪಿತರು ನಮ್ಮ ಜಮೀನಿಗೆ ಕುರಿ ಮತ್ತು ಮೇಕೆಗಳನ್ನು ಮೇಯಲು ಬಿಟ್ಟ ವಿಚಾರವನ್ನು ನನ್ನ ತಾಯಿ ಕೇಳಿದ್ದಕ್ಕೆ ಆರೋಪಿತರಿಬ್ಬರೂ ಸೇರಿಕೊಂಡು ನನ್ನ ತಾಯಿಯನ್ನು ಹಿಡಿದು ಹೊಡೆಯುತ್ತಿದ್ದಾರೆಂದು ಹೇಳಿರುತ್ತಾರೆ. ನಂತರ ನಾನು 4 ಗಂಟೆಯ ಸಮಯಕ್ಕೆ ಕುಣಿಗಲ್ ನಿಂದ ನಮ್ಮ ಊರಿಗೆ ಹೋಗಿ ನನ್ನ ತಾಯಿಯನ್ನು ಕೇಳಲಾಗಿ ಆರೋಪಿತರು ಹೊಡೆದಿರುವುದಾಗಿ ನಿಜವೆಂದು ಗೊತ್ತಾದ ಮೇಲೆ ನನ್ನ ತಾಯಿಯನ್ನು ಲೋಪರ್ ಮುಂಡೆ ಹಲಖಾ ಮುಂಡೆ ಎಂದು ಬೈದು ಆರೋಪಿ 2 ನನ್ನ ತಾಯಿಯ ತಲೆಯ ಕುದಲು ಹಿಡಿದುಕೊಂಡು ಎಳೆದಾಡಿ ಆರೋಪಿಪರು ಅಸಬ್ಯವಾಗಿ ವರ್ತಿಸಿರುತ್ತಾರೆ. ನಂತರ ಆರೋಪಿ 1 ನನ್ನ ತಾಯಿಯ ಸೀರೆಯನ್ನು ಹಿಡಿದು ಎಳೆದಾಡಿ ಎದೆ ಬಾಗದ ಕುಬ್ಬಸವನ್ನು ಹಿಡಿದು ನೆಲಕ್ಕೆ ತಳ್ಳಿದ್ದು ನಂತರ ಅಲ್ಲಿ ಇದ್ದ ಕಲ್ಲನ್ನು ಮತ್ತು ದೊಣ್ಣೆಯನ್ನು ತಗೆದುಕೊಂಡು ನನ್ನ ತಾಯಿಯ

ಸೊಂಟಕ್ಕೆ ಹೊಡೆದು ಇದೇ ರೀತಿ ನಡೆದುಕೊಂಡರೆ ನಿನ್ನ ಪ್ರಾಣ ತಗೆಯುವುದಾಗಿ ಹೇಳಿ ಪ್ರಾಣ ಬೆದರಿಕೆ ಹಾಕಿ ಹೊರಟು ಹೋಗಿರುತ್ತಾರೆ. ನಂತರ ನಾನು ವಿಚಾರವನ್ನು ನನ್ನ ತಂದೆಗೆ ತಿಳಿಸಿದ್ದು ನನ್ನ ತಂದೆ 4.15 ಗಂಟೆಯ ಸಮಯದಲ್ಲಿ ಬಂದು ಬ್ಯಾಡರಹಳ್ಳಿ ನಾಗಸಂದ್ರ ರಸ್ತೆಗೆ ಹೋಗಿ ಆಟೋದಲ್ಲಿ ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ನನ್ನ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು. ಆರೋಪಿತರ ಪರ ಬಿ.ಆರ್ ಆರ್. ವಕೀಲರಿಂದ**

ನನ್ನ ಕಾಲೇಜು ಸಮಯ ಬೆಳಿಗ್ಗೆ 9 ರಿಂದ 2 ಗಂಟೆ ಆಗಿರುತ್ತದೆ. ನಾನು ಪೊಲಿಸರ ಮುಂದೆ ಹೇಳಿಕೆ ನೀಡುವ ಸಮಯದಲ್ಲಿ ಕುಣಿಗಲ್ ಬಸ್ ನಿಲ್ದಾಣದಲ್ಲಿದ್ದಾಗ ಚಾಸಾ 3 ಅವರು ನನಗೆ ಕರೆ ಮಾಡಿರುತ್ತಾರೆಂದು ನಾನು ಹೇಳಿರುತ್ತೇನೆ. ನನ್ನ ಹೇಳಿಕೆಯಲ್ಲಿ ಏನು ಬರೆದುಕೊಂಡಿರುತ್ತಾರೆಂದು ನನಗೆ ಗೊತ್ತು. ಬಸ್ ನಿಲ್ದಾಣದಲ್ಲಿದ್ದಾಗ ನನಗೆ ಕರೆ ಬಂದಿರುತ್ತದೆಂದು ನಾನು ಪೊಲಿಸರಿಗೆ ಹೇಳಿಲ್ಲ ಮತ್ತು ಅವರು ಬರೆದುಕೊಂಡಿಲ್ಲವೆಂದರೆ ಸರಿಯಲ್ಲ. ಪೋಲಿಸರಿಗೆ ನಾನು ಚಾಸಾ 3 ಅವರ ಪೋನ ನಂಬರ ಅನ್ನು ತೋರಿಸಿರುತ್ತೇನೆ. ಅವರು ಹೇಳಿಕೆಯಲ್ಲಿ ಬರೆದುಕೊಂಡಿರಹುದೆಂದು ಹೇಳಿರುತ್ತಾರೆ.

ಕುರಿ ಮೇಕೆಗಳನ್ನು ಯಾವ ಬೆಳೆಯನ್ನು ಮೇಯಿದು ಹಾಳು ಮಾಡಿರುವ ಬಗ್ಗೇ ನಾನು ಹೇಳಿಕೆ ನೀಡುವ ಮೊದಲು ಪರಿಶೀಲನೆ ಮಾಡಿ ಪೋಲಿಸರಿಗೆ ಹೇಳಿರುವುದಿಲ್ಲ. ದೊಣ್ಣೆಯಿಂದ ನನ್ನ ತಾಯಿ ತೊಡೆಗೆ ಮತ್ತು ಸೊಂಟಕ್ಕೆ ಹೊಡೆದಿರುತ್ತಾರೆಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರವನ್ನು ನನ್ನ ಹೇಳಿಕೆ ನೀಡುವ ಸಮಯದಲ್ಲಿ ನಾನು ಪೋಲಿಸರಿಗೆ ಹೇಳಿರುತ್ತೇನೆ. ಚಾಸಾ 1 ಅವರ ಕಪ್ಪು ಬಣ್ಣದ ಕುಪ್ಪಸವನ್ನು ಹರಿದು ಹಾಕಿರುತ್ತಾರೆ. ಪೋಲಿಸರ ಮುಂದೆ ಹೇಳಿಕೆ ನೀಡುವ ಸಮಯದಲ್ಲಿ ಬಣ್ಣದ ಬಗ್ಗೆ ಹೇಳಿರುವುದಿಲ್ಲ. ನಾನು ನೋಡಿದೆ ಎಂದು ಹೇಳುವ ಕಪ್ಪು ಬಣ್ಣದ ಕುಪ್ಪಸ 3 ರಿಂದ 4 ಕಡೆ ಹರಿದಿತ್ತು. ಸದರಿ ಕುಪ್ಪಸ 2 ಭುಜ, ಬೆನ್ನ ಹಿಂಬಾಗ, ಹರಿದಿರುತ್ತದೆ.

ನ್ಯಾಯಾಲಯದ ಮುಂದೆ ಇರುವ ಮು. ಮಾ. ಅನ್ನು ಸಾಕ್ಷಿಗೆ ತೋರಿಸಿ ಬೆನ್ನಿನ ಹಿಂಬಾಗ ಹರಿದು ಹೋದ ಬಗ್ಗೆ ಕೇಳಲಾಗಿ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ. ಬಲಭುಜದ ರವಿಕೆ ಹರಿದಿಲ್ಲವೆಂದರೆ ಸರಿ. ಸಾಕ್ಷಿ ಎಡ ಭುಜ ಹರಿದಿರುತ್ತದೆಂದು ಹೇಳುತ್ತಾರೆ.

ಆಗಿದೆ ಎಂದು ಹೇಳುವ ಗಲಾಟೆಯ ಸಮಯದಲ್ಲಿ ಆಗುವ ಗಲಾಟೆಯನ್ನು ಇಂತವರು ನೋಡಿದ ಬಗ್ಗೆ ಹೇಳಿರುತ್ತಾರಾ ಎಂದರೆ ಸಾಕ್ಷಿ ಹೇಳಿರುತ್ತಾರೆಂದು ನುಡಿಯುತ್ತಾರೆ. ಅವರು ಸಹ ಗಲಾಟೆ ನೋಡಿರುತ್ತಾರೆಂದು ನನಗೆ ಕರೆ ಮಾಡಿದಾಗ ಹೇಳಿರುತ್ತಾರೆ. ನಾನು ಪೊಲಿಸರ ಮುಂದೆ ಹೇಳಿಕೆ ನೀಡುವ ಸಮಯದಲ್ಲಿ ಚಾಸಾ 3 ಅವರು ಗಲಾಟೆಯನ್ನು ಕಣ್ಣಾರೆ ನೋಡಿರುತ್ತಾರೆಂದು ನನಗೆ ಹೇಳಿರುತ್ತಾರೆಂದು ನಾನು ಹೇಳಿಕೆ ನೀಡಿರುತ್ತೇನೆ.

ಕಲ್ಲು ಮತ್ತು ದೊಣ್ಣೆಯನ್ನು ಬಿಸಾಡಿ ಹೋಗಿರುವ ಬಗ್ಗೆ ನಾನು ಪೊಲಿಸರ ಮುಂದೆ ಹೇಳಿರುವ ಹೇಳಿಕೆಯಲ್ಲಿ ಹೇಳಿರುತ್ತೇನೆ. ಚಾಸಾ 3 ಅವರು ನನಗೆ ಕರೆ ಮಾಡಿದಾಗ ಆರೋಪಿ 1 ಅವರ ಕೈಯಲ್ಲಿ ದೊಣ್ಣೆ ಮತ್ತು ಆರೋಪಿ 2 ಅವರ ಕೈಯಲ್ಲಿ ಕಲ್ಲು ಇತ್ತು ಎಂದು ಹೇಳುತ್ತಾರೆ. ಚಾಸಾ 3 ಅವರು ನನಗೆ ಕರೆ ಮಾಡಿದಾಗ ಆರೋಪಿ 2 ಕಲ್ಲಿನಿಂದ ಹೊಡೆದಿರುವುದಾಗಿ ನನಗೆ ಹೇಳಿರುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ಆರೋಪಿ 1 ಕಲ್ಲಿನಿಂದ ಸೊಂಟಕ್ಕೆ ಮತ್ತು ತೊಡೆಗೆ ಹೊಡೆದ ಬಗ್ಗೆ ಹೇಳಿರುವುದಿಲ್ಲ ಸದರಿ ***ಹೇಳಿಕೆಯ ಬಾಗವನ್ನು ನಿ.ಡಿ 1 ಎಂದು ಗುರುತಿಸಲಾಯಿತು.***

ಚಾಸಾ 1 ಅವರಿಗೆ ನಾನೇ ಕರೆ ಮಾಡಿರುತ್ತೇನೆ. ಚಾಸಾ 1 ಅವರು ಚಾಸಾ 2 ಅವರನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದನ್ನು ನಾನು ನೋಡಿರುತ್ತೇನೆ. ಆಟೋ ನಂಬರ ನನಗೆ ಗೊತ್ತಿಲ್ಲ. ಆಗಿದೆ ಎಂದು ಹೇಳುವ ಗಲಾಟೆಯದಲ್ಲಿ ನನ್ನ ತಾಯಿಗೆ 2 ಗಾಯಗಳು ಆಗಿದ್ದವು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಹೇಳಿರುವ ದಿನಾಂಕ ಮತ್ತು ಸಮಯ ಹಾಗೂ ಸ್ಥಳದಲ್ಲಿ ಯಾವುದೇ ಗಲಾಟೆ ಆರೋಪಿ ಮತ್ತು ನನ್ನ ತಾಯಿಯ ನಡುವೆ ಆಗಿಲ್ಲ ಅವರು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಕೊಲೆ ಬೆದರಿಕೆ ಹಾಕಿಲ್ಲ

ಯಾವುದೇ ಆಯುದದಿಂದ ಹಲ್ಲೆ ಮಾಡಿಲ್ಲ ನಾನು ಆರೋಪಿತರ ಮೇಲಿನ ದ್ವೇಷದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗದೇ ಇರುವ ಕಾರಣ ನನ್ನ ತಾಯಿಯ ಸೀರೆಯನ್ನು ಹಿಡಿದು ಎಳೆದಾಡಿ ಎದೆ ಬಾಗದ ಕುಪ್ಪಸದ ಬಟ್ಟೆಯನ್ನು ಹರಿದು ಹಾಕಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ಅವರು ನೀಡಿದ ಸುಳ್ಳು ದೂರಿಗೆ ಅನುಗುಣವಾಗಿ ನಾನು ಮತ್ತು ನನ್ನ ತಾಯಿ ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.